I/648865/2024

**ಕರ್ನಾಟಕ ಸರ್ಕಾರ**
**Government of Karnataka**

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು) ರವರ ಕಛೇರಿ
Office of the
Principal Chief Conservator of Forests
(Head of Forest Force)

ಅರಣ್ಯ ಭವನ, 18ನೇ ಅಡ್ಡ ರಸ್ತೆ
ಮಲ್ಲೇಶ್ವರಂ, ಬೆಂಗಳೂರು – 03
Aranya Bhavan, 18th Cross
Malleshwaram, Bengaluru – 03
Tele: 080 23343770
Email: pccfrecruitment@gmail.com

**No.** KFD/HOFF/B9(KAT)/3/2022-PnR-KFD **E-881650**
Dated:31.07.2024

# ಅಧಿಕೃತ ಜ್ಞಾಪನ ಪತ್ರ

*[ಜ್ಯೇಷ್ಠತೆ ಪುನರ್ ನಿಗದಿ]*

**ವಿಷಯ:** ಶ್ರೀ ಪ್ರವೀಣ್ ಕುಮಾರ್ ಎನ್., ವಲಯ ಅರಣ್ಯಾಧಿಕಾರಿ (ಅಭ್ಯರ್ಥಿ) ಇವರು ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ, ಬೆಂಗಳೂರು ಇಲ್ಲಿ ದಾಖಲಿಸಿರುವ ಅರ್ಜಿ ಸಂಖ್ಯೆ:2064/2012ರ ಆದೇಶ ದಿನಾಂಕ: 30.01.2018ರ ಅನುಪಾಲನೆ ಕುರಿತು.

**ಉಲ್ಲೇಖ:**

1. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ಹಾಗೂ ಆಯ್ಕೆ ಪ್ರಾಧಿಕಾರ, ಬೆಂಗಳೂರು ರವರ ಕಛೇರಿ ನೇರ ನೇಮಕಾತಿ ಅಧಿಸೂಚನೆ ಸಂಖ್ಯೆ: ಬಿ9/ವಅಅ/ತರಬೇತಿ/ವಿವ-2/2009-10, ದಿನಾಂಕ:20.08.2011 *[63 ವಲಯ ಅರಣ್ಯ ಅಧಿಕಾರಿ ಹುದ್ದೆಗಳಿಗೆ ನೇರ ನೇಮಕಾತಿ ಅಧಿಸೂಚನೆ].*
2. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 08 ಸೆಹಿಮ 95, ದಿನಾಂಕ:20.06.1995 *[ಭಾರತ ಸಂವಿಧಾನದ ಅನುಚ್ಛೇದ 16(4)ರ ಅನ್ವಯ ರಾಜ್ಯ ಸಿವಿಲ್ ಸೇವೆಗಳಿಗೆ ನೇರ ನೇಮಕಾತಿಯಲ್ಲಿ ಮೀಸಲಾತಿ].*
3. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ಹಾಗೂ ಆಯ್ಕೆ ಪ್ರಾಧಿಕಾರ, ಬೆಂಗಳೂರು ರವರ ಕಛೇರಿ ಪ್ರಕಟಣೆ ದಿನಾಂಕ:29.03.2012 *[ವಲಯ ಅರಣ್ಯ ಅಧಿಕಾರಿ 1:1 (ಹುದ್ದೆ:ಅಭ್ಯರ್ಥಿಗಳ) ಅಂತಿಮ ಆಯ್ಕೆ ಪಟ್ಟಿ ಮತ್ತು ಕಾಯುವಿಕೆ ಪಟ್ಟಿ]*
4. ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿ, ಬೆಂಗಳೂರು ಅರ್ಜಿ ಸಂಖ್ಯೆ: 2064/2012ರ ಆದೇಶ ದಿನಾಂಕ:30.01.2018 *[ಶ್ರೀ ಪ್ರವೀಣ್ ಕುಮಾರ್ ಎನ್. - ವಿರುದ್ಧ - ಸರ್ಕಾರ ಮತ್ತು ಇತರರು]*
5. ಸರ್ಕಾರಿ ವಕೀಲರು, ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ, ಬೆಂಗಳೂರು ಇವರ ಅಭಿಪ್ರಾಯ ಪತ್ರ ಸಂಖ್ಯೆ:20615 AG/KSAT, ದಿನಾಂಕ:16/23.03.2018 *[ಸರ್ಕಾರಿ ವಕೀಲರ ಕಾನೂನು ಅಭಿಪ್ರಾಯ].*
6. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು), ಬೆಂಗಳೂರು ರವರ ಕಛೇರಿ ಸಮ ಪತ್ರ ಸಂಖ್ಯೆ ಪತ್ರ ದಿನಾಂಕ:24.07.2019 ಮತ್ತು 29.10.2022 *[ಉಲ್ಲೇಖ (4)ರ ಆದೇಶದ ಅನುಪಾಲನೆಗಾಗಿ ಸರ್ಕಾರದ ನಿರ್ದೇಶನವನ್ನು ಕೋರಿರುವುದು].*
7. ಸರ್ಕಾರದ ಪತ್ರ ಸಂಖ್ಯೆ: ಅಪಜೀ 40 ಅಅಸೇ 2019(ಇ), ದಿನಾಂಕ:27.02.2023.
8. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು), ಬೆಂಗಳೂರು ರವರ ಕಛೇರಿಯ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: KFD/HOFF/ B1(EST)/104/ 2023-PnR-KFD (E-1162701), ದಿನಾಂಕ:15.04.2024 *[ಕರಡು ಜ್ಯೇಷ್ಠತಾ ಪಟ್ಟಿ ಪ್ರಕಟಿಸಿರುವುದು].*
9. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು), ಬೆಂಗಳೂರು ರವರ ಕಛೇರಿ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ: KFD/HOFF/B1(EST)/104/2023-PnR-KFD (E-1162701), ದಿನಾಂಕ:29.06.2024 *[ದಿನಾಂಕ:27.04.1978 ರಿಂದ 31.12.2023ರವರೆಗಿನ ಉಳಿಕೆ ಮೂಲ ವೃಂದದ (Non-HK) ವಲಯ ಅರಣ್ಯಾಧಿಕಾರಿಗಳ (Range Forest Officers) ಅಂತಿಮ ಜ್ಯೇಷ್ಠತಾ ಪಟ್ಟಿ (Final List)ಯನ್ನು ಪ್ರಕಟಿಸಿರುವುದು].*

## ಪ್ರಸ್ತಾವನೆ:

ಉಲ್ಲೇಖ (1)ರ ಈ ಕಛೇರಿಯ ಅಧಿಸೂಚನೆಯಲ್ಲಿ, ವಲಯ ಅರಣ್ಯಾಧಿಕಾರಿ ವೃಂದದಲ್ಲಿ ನೇರ ನೇಮಕಾತಿ ಕೋಟಾದಡಿ ಖಾಲಿ ಇರುವ ಹುದ್ದೆಗಳನ್ನು, ಕರ್ನಾಟಕ ಅರಣ್ಯ ಇಲಾಖಾ ಸೇವೆಗಳು

(ನೇಮಕಾತಿ) ನಿಯಮಗಳು, 2003ರ ಅನ್ವಯ ಅರ್ಹ ಬಿ.ಎಸ್ಸಿ. (ಅರಣ್ಯ ಶಾಸ್ತ್ರ) ಪದವೀಧರರಿಗೆ 32 ಹುದ್ದೆಗಳು ಹಾಗೂ ವಿಜ್ಞಾನ/ ಇಂಜಿನಿಯರಿಂಗ್ ಪದವೀಧರರಿಗೆ 31 ಹುದ್ದೆಗಳು, ಒಟ್ಟು 63 ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ.

ಉಲ್ಲೇಖ (2)ರ ಸರ್ಕಾರದ ಆದೇಶ ದಿನಾಂಕ:20.06.1995ರ ಕಂಡಿಕೆ (7)ರಲ್ಲಿ ***"ಪ್ರವರ್ಗ-I, ಪ್ರವರ್ಗ-II(ಎ), ಪ್ರವರ್ಗ-II(ಬಿ), ಪ್ರವರ್ಗ-III(ಎ) ಮತ್ತು ಪ್ರವರ್ಗ-III(ಬಿ) ಇವರುಗಳಿಗಾಗಿ ಗುರುತಿಸಲ್ಪಟ್ಟ, ಆದರೆ ಆಯಾ ವರ್ಗದ ಅರ್ಹ ಅಭ್ಯರ್ಥಿಗಳ ಲಭ್ಯತೆಯಲ್ಲಿನ ಕೊರತೆಯಿಂದಾಗಿ ಭರ್ತಿ ಮಾಡಲಾಗದ ರಿಕ್ತ ಸ್ಥಾನಗಳನ್ನು ಸಾಮಾನ್ಯ ವರ್ಗದ ಅಭ್ಯರ್ಥಿಗಳಿಂದ ಭರ್ತಿ ಮಾಡತಕ್ಕದ್ದು ಮತ್ತು ಈ ರೀತಿ ನಷ್ಟಗೊಂಡ ರಿಕ್ತ ಸ್ಥಾನಗಳನ್ನು ಮುಂದಿನ ಮತ್ತು ತದನಂತರದ ನೇಮಕಾತಿಗಳಲ್ಲಿ ಮುಂದಕ್ಕೆ ಕೊಂಡೊಯ್ಯತಕ್ಕದ್ದು."*** ಎಂದು ಇರುತ್ತದೆ.

ಸದರಿ ಆದೇಶದನ್ವಯ ಉಲ್ಲೇಖ (1)ರ ವಲಯ ಅರಣ್ಯ ಅಧಿಕಾರಿ ನೇರ ನೇಮಕಾತಿ ಅಧಿಸೂಚನೆಯ ಪ್ರಕ್ರಿಯೆಯಲ್ಲಿ ಪ್ರವರ್ಗ-I (ಗ್ರಾಮೀಣ) ಮೀಸಲಾತಿ ಅಭ್ಯರ್ಥಿಗಳಿಗೆ ಗುರುತಿಸಲ್ಪಟ್ಟ ರಿಕ್ತ ಸ್ಥಾನಕ್ಕೆ ಅರ್ಹ ಅಭ್ಯರ್ಥಿಯ ಕೊರತೆಯ ಕಾರಣದಿಂದ ಭರ್ತಿ ಮಾಡಲಾಗದ ರಿಕ್ತ ಸ್ಥಾನವನ್ನು ಸಾಮಾನ್ಯ ವರ್ಗ (ಗ್ರಾಮೀಣ)ದ ಅಭ್ಯರ್ಥಿಯಾದ ಶ್ರೀ ಗಣೇಶ ಹೆಗ್ಡೆ (Reg. No. 100157), ಬಿ.ಎಸ್ಸಿ. (ಅರಣ್ಯ ಶಾಸ್ತ್ರ) ಪದವೀಧರ ಇವರನ್ನು ಭರ್ತಿ ಮಾಡಲಾಗಿರುತ್ತದೆ.

ಉಲ್ಲೇಖ (3)ರ ಪ್ರಧಾನ ಕಛೇರಿಯ ಪ್ರಕಟಣೆಯಲ್ಲಿ *"63 ಸಂಖ್ಯೆ ವಲಯ ಅರಣ್ಯ ಅಧಿಕಾರಿ ಹುದ್ದೆಗಳ ತರಬೇತಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಸಂಬಂದ 1:2 ಅಂತಿಮ ಆಯ್ಕೆ ಪಟ್ಟಿಯನ್ನು ದಿನಾಂಕ:17.03.2012ರಂದು ಪ್ರಕಟಿಸಿ, ಈ ಪಟ್ಟಿಯಲ್ಲಿರುವ ಅಭ್ಯರ್ಥಿಗಳ ಮೂಲ ದಾಖಲೆಗಳ ಪರಿಶೀಲನೆ, ದೇಹದಾರ್ಢ್ಯತೆ ಪರೀಕ್ಷೆ, ವೈದ್ಯಕೀಯ ಪರೀಕ್ಷೆ ಮತ್ತು ದೈಹಿಕ ತಾಳ್ವಿಕೆ ಪರೀಕ್ಷೆಗಳನ್ನು ನಡೆಸಲಾಗಿದ್ದು, ಈ ಪರೀಕ್ಷೆಗಳಲ್ಲಿ ಅರ್ಹತೆ ಹೊಂದಿರುವ ಅಭ್ಯರ್ಥಿಗಳ ಕುರಿತು ಹಾಗೂ ಮೆರಿಟ್ ಆಧಾರದ ಮೇಲೆ ಮತ್ತು ಪ್ರಸ್ತುತ ಚಾಲ್ತಿಯಲ್ಲಿರುವ ಎಲ್ಲಾ ಮೀಸಲಾತಿ ನಿಯಮಗಳ ಅನುಸಾರ 1:1 (ಹುದ್ದೆ:ಅಭ್ಯರ್ಥಿ) ಗಳ ಅಂತಿಮ ಆಯ್ಕೆ ಪಟ್ಟಿ ಮತ್ತು ಕಾಯುವಿಕೆ ಪಟ್ಟಿಯನ್ನು ಪ್ರಕಟಿಸಲಾಗಿದೆ"* ಎಂದು ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ.

ಸದರಿ ನೇರ ನೇಮಕಾತಿ ಅಧಿಸೂಚನೆಗೆ ಸಂಬಂಧಿಸಿದಂತೆ ಶ್ರೀ ಪ್ರವೀಣ್ ಕುಮಾರ್ ಎನ್. (Reg. No.100511) ಇವರು ಪ್ರವರ್ಗ-I ರಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಆದರೆ ಸದರಿಯವರು 'ಗ್ರಾಮೀಣ ಮೀಸಲಾತಿ' ಪರಿವ್ಯಾಪ್ತಿಗೆ ಬಾರದೇ ಇದ್ದುದರಿಂದ ಅಧಿಸೂಚಿತ ಪ್ರವರ್ಗ-I (ಗ್ರಾಮೀಣ) ಹುದ್ದೆಗೆ ಪರಿಗಣಿಸಲು ಸಾಧ್ಯವಾಗಿರುವುದಿಲ್ಲ. ಅಲ್ಲದೇ, ಉಲ್ಲೇಖ (2)ರ ಸರ್ಕಾರದ ಆದೇಶದ ಕಂಡಿಕೆ (7)ರನ್ವಯ ಸಾಮಾನ್ಯ ವರ್ಗ (ಗ್ರಾಮೀಣ)ಕ್ಕೆ ಸೇರಿದ ಶ್ರೀ ಗಣೇಶ್ ಹೆಗ್ಡೆ (Reg. No. 100157) ಇವರನ್ನು ಸದರಿ ಪ್ರವರ್ಗ-I (ಗ್ರಾಮೀಣ) ರಿಕ್ತ ಸ್ಥಾನಕ್ಕೆ ನಿಯಮಾನುಸಾರ ಆಯ್ಕೆ ಮಾಡಲಾಗಿರುತ್ತದೆ.

ಆದರೆ, ಪ್ರವರ್ಗ-I (ಗ್ರಾಮೀಣ) ರಿಕ್ತ ಸ್ಥಾನಕ್ಕೆ ಶ್ರೀ ಗಣೇಶ್ ಹೆಗ್ಡೆ (Reg. No. 100157) ಇವರ ಆಯ್ಕೆಯನ್ನು ಪ್ರಶ್ನಿಸಿ, ಶ್ರೀ ಪ್ರವೀಣ್ ಕುಮಾರ್ ಎನ್., (Reg. No.100511)ಯು ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ, ಬೆಂಗಳೂರು ಅರ್ಜಿ ಸಂಖ್ಯೆ:2064/2012ನ್ನು ದಾಖಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ಉಲ್ಲೇಖ (4)ರಲ್ಲಿ ದಿನಾಂಕ:30.01.2018ರಂದು ನ್ಯಾಯಮಂಡಳಿಯು ಆದೇಶವನ್ನು ನೀಡಿದ್ದು, ಸದರಿ ಆದೇಶದ ಉದ್ಧೃತ ಭಾಗ ಈ ಕೆಳಕಂಡಂತಿರುತ್ತದೆ.

***"ORDER***

*(i) The selection list dated 29.03.2012 (Annexure-A5) is not interfered with. However, the 1st respondent is directed to assign the proper ranking to the applicant as per the selection criteria set out in the recruitment Notification dated 20.08.2011.*

I/648865/2024

(ii) *The applicant is entitled to the seniority with effect from the date on which his immediate junior has joined the service as per the recruitment Notification dated 20.08.2011.*

(iii) *As regard the 3rd respondent Sri. Ganesh Hegde, he would not be disturbed and if necessary, he can be placed at the bottom of the seniority list prepared in pursuance of the said recruitment Notification dated 20.08.2011."*

ಉಲ್ಲೇಖ (5)ರಲ್ಲಿ ಸರ್ಕಾರಿ ವಕೀಲರು, ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ, ಬೆಂಗಳೂರು ಇವರು ನ್ಯಾಯಮಂಡಳಿಯು ಈ ಮೇಲಿನ ಆದೇಶ ದಿನಾಂಕ:30.01.2018ರ ವಿರುದ್ಧ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ (ಮೇಲ್ಮನವಿ) ಸಲ್ಲಿಸಲು ಅನರ್ಹ ಪ್ರಕರಣವೆಂದು ಕಾನೂನು ಅಭಿಪ್ರಾಯ ನೀಡಿರುತ್ತಾರೆ.

ಸರ್ಕಾರಿ ವಕೀಲರ ಕಾನೂನು ಅಭಿಪ್ರಾಯದ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ, ಬೆಂಗಳೂರು ಆದೇಶ ದಿನಾಂಕ:30.01.2018ರ ಅನುಪಾಲನೆಗೆ ಸಂಬಂಧಿಸಿದಂತೆ ಈ ಕಛೇರಿಯ ಉಲ್ಲೇಖ (6)ರ ದಿನಾಂಕ:24.07.2019ರ ಪತ್ರ ಹಾಗೂ 29.10.2022ರ ಅರೆ ಸರ್ಕಾರಿ ಪತ್ರದಲ್ಲಿ ಸರ್ಕಾರದ ನಿರ್ದೇಶನವನ್ನು ಕೋರಲಾಗಿರುತ್ತದೆ.

ಈ ಸಂಬಂಧ ಉಲ್ಲೇಖ (7)ರ ಸರ್ಕಾರದ ಪತ್ರದಲ್ಲಿ "***ಸದರಿ ಪ್ರಕರಣದಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ಇವರೇ ಸಕ್ಷಮ ಪ್ರಾಧಿಕಾರವಾಗಿರುವುದರಿಂದ ಮಾನ್ಯ ನ್ಯಾಯ ಮಂಡಳಿಯ ಆದೇಶದ ಪಾಲನೆ ಬಗ್ಗೆ ತಮ್ಮ ಹಂತದಲ್ಲಿಯೇ ನಿರ್ಣಯಿಸಿ ಸೂಕ್ತ ಕ್ರಮವಹಿಸುವಂತೆ***" ತಿಳಿಸಲಾಗಿರುತ್ತದೆ .

ಕರ್ನಾಟಕ ಅರಣ್ಯ ಇಲಾಖೆ ಸೇವೆಗಳು (ನೇಮಕಾತಿ) ನಿಯಮಾವಳಿ 2003ರಲ್ಲಿ ವಲಯ ಅರಣ್ಯ ಅಧಿಕಾರಿ ವೃಂದಕ್ಕೆ ಸಂಬಂಧಿಸಿದಂತೆ ನೇರ ನೇಮಕಾತಿ ಪ್ರಕ್ರಿಯೆ ಮೂಲಕ ಆಯ್ಕೆಯಾದ ವಲಯ ಅರಣ್ಯ ಅಧಿಕಾರಿಗಳ ಅಂತರ್ ಜ್ಯೇಷ್ಠತೆಯನ್ನು ನಿಗದಿಪಡಿಸುವ ಕುರಿತು ಪ್ರತ್ಯೇಕವಾದ ನಿರ್ಧಿಷ್ಟ ಮಾನದಂಡ ಇರುವುದಿಲ್ಲ.

ಈ ಕಛೇರಿಯ ಉಲ್ಲೇಖ (8)ರ ಅಧಿಕೃತ ಜ್ಞಾಪನ ಪತ್ರದಲ್ಲಿ ದಿನಾಂಕ:27.04.1978 ರಿಂದ 31.12.2023ರವರೆಗಿನ ಉಳಿಕೆ ಮೂಲ ವೃಂದದ (Non-HK) ವಲಯ ಅರಣ್ಯಾಧಿಕಾರಿಗಳ (Range Forest Officers) ಕರಡು ಜ್ಯೇಷ್ಠತಾ ಪಟ್ಟಿ (Draft Seniority List) ಪ್ರಕಟಿಸಿ, ಈ ಕುರಿತು ಬಾಧಿತರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಿ, ಸ್ವೀಕರಿಸಿದ ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಶೀಲಿಸಿ, ವಿಲೇವಾರಿ ಮಾಡಿದ ನಂತರ ಉಲ್ಲೇಖ (9)ರ ಅಧಿಕೃತ ಜ್ಞಾಪನ ಪತ್ರದಲ್ಲಿ ಸದರಿ ಅವಧಿಗೆ ಉಳಿಕೆ ಮೂಲ ವೃಂದದ (Non-HK) ವಲಯ ಅರಣ್ಯಾಧಿಕಾರಿಗಳ (Range Forest Officers) ಅಂತಿಮ ಜ್ಯೇಷ್ಠತಾ ಪಟ್ಟಿ (Final List)ಯನ್ನು ಈಗಾಗಲೇ ಅರಣ್ಯ ಇಲಾಖೆಯ ಜಾಲತಾಣದಲ್ಲಿ ಪ್ರಕಟಿಸಲಾಗಿರುತ್ತದೆ. ಈ ಪ್ರಕರಣದಲ್ಲಿನ ಶ್ರೀ ಪ್ರವೀಣ್ ಕುಮಾರ್ ಎನ್., ವಲಯ ಅರಣ್ಯ ಅಧಿಕಾರಿ ಇವರು ಸದರಿ ಕರಡು ಜ್ಯೇಷ್ಠತಾ ಪಟ್ಟಿಗೆ ಸಲ್ಲಿಸಿರುವ ಆಕ್ಷೇಪಣೆಗೆ ಸಂಬಂಧಿಸಿದಂತೆ, *"ಆಕ್ಷೇಪಣೆದಾರರು ದಾಖಲಿಸಿರುವ KSAT A. No. 2064/2012 ಆದೇಶ ದಿನಾಂಕ: 30-01-2018ರನ್ವಯ ಜೇಷ್ಠತೆ ಪುನರ್ ನಿಗದಿಪಡಿಸುವ ವಿಷಯವು ಸಂಬಂಧಿಸಿದ ಕಡತದಲ್ಲಿ ಪ್ರತ್ಯೇಕವಾಗಿ ಇತ್ಯರ್ಥಗೊಳಿಸಬೇಕಾಗಿರುವುದರಿಂದ ಈ ಆಕ್ಷೇಪಣೆಯನ್ನು ಪ್ರಸ್ತುತ ಹಂತದಲ್ಲಿ ಪರಿಗಣಿಸಲು ಅವಕಾಶವಿರುವುದಿಲ್ಲ. ಆದುದರಿಂದ ಈ ಆಕ್ಷೇಪಣೆಯನ್ನು ಈ ಮೂಲಕ ವಿಲೇ ಮಾಡಲಾಗಿದೆ."* ಎಂದು ಉತ್ತರಿಸಿ ಸದರಿ ಆಕ್ಷೇಪಣೆಯನ್ನು ವಿಲೇಗೊಳಿಸಲಾಗಿರುತ್ತದೆ.

ಈ ರೀತಿ ಪ್ರಸ್ತುತ ಉಳಿಕೆ ಮೂಲ ವೃಂದದ (Non-HK) ವಲಯ ಅರಣ್ಯಾಧಿಕಾರಿಗಳ (Range Forest Officers) ಅಂತಿಮ ಜ್ಯೇಷ್ಠತಾ ಪಟ್ಟಿ (Final List) ಅಸ್ತಿತ್ವದಲ್ಲಿರುವುದರಿಂದ, ಶ್ರೀ ಪ್ರವೀಣ್ ಕುಮಾರ್ ಎನ್., ವಲಯ ಅರಣ್ಯಾಧಿಕಾರಿ ಇವರ ಜ್ಯೇಷ್ಠತೆಯನ್ನು ಉಲ್ಲೇಖ (4)ರ ಕರ್ನಾಟಕ ರಾಜ್ಯ

ಆಡಳಿತ ನ್ಯಾಯ ಮಂಡಳಿ, ಬೆಂಗಳೂರು ಆದೇಶ ದಿನಾಂಕ:30.01.2018ರ ಅನುಪಾಲನೆಯ ಹಿನ್ನೆಲೆಯಲ್ಲಿ ಪುನರ್‌ನಿಗದಿಪಡಿಸಬೇಕಾಗಿರುತ್ತದೆ

ಆದುದರಿಂದ ಈ ಕೆಳಕಂಡ

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ, ಬೆಂಗಳೂರು ಅರ್ಜಿ ಸಂಖ್ಯೆ:2064/2012 [ಶ್ರೀ ಪ್ರವೀಣ್ ಕುಮಾರ್ ಎನ್. - ವಿರುದ್ಧ – ಸರ್ಕಾರ]ರ ಆದೇಶ ದಿನಾಂಕ:30.01.2018ರ ಅನುಪಾಲನೆಗಾಗಿ, ಉಲ್ಲೇಖ (9)ರ ಈ ಕಛೇರಿ ಅಧಿಕೃತ ಜ್ಞಾಪನ ಪತ್ರದಲ್ಲಿ ಪ್ರಕಟಿಸಿದ ದಿನಾಂಕ:27.04.1978 ರಿಂದ 31.12.2023ರವರೆಗಿನ ಉಳಿಕೆ ಮೂಲ ವೃಂದದ (Non-HK) ವಲಯ ಅರಣ್ಯಾಧಿಕಾರಿಗಳ (Range Forest Officers) ಅಂತಿಮ ಜ್ಯೇಷ್ಠತಾ ಪಟ್ಟಿ(Final Seniority List)ಯಲ್ಲಿ **ಶ್ರೀ ಪ್ರವೀಣ್ ಕುಮಾರ್ ಎನ್., ವಲಯ ಅರಣ್ಯಾಧಿಕಾರಿ ಇವರ ಜ್ಯೇಷ್ಠತಾ ಕ್ರಮ ಸಂಖ್ಯೆ:1650ರಲ್ಲಿ ನಿಗದಿಪಡಿಸಿರುವ ಜ್ಯೇಷ್ಠತೆಯನ್ನು ಮಾರ್ಪಡಿಸಿ, ಈ ಕೆಳಕಂಡಂತೆ ಮರುನಿಗದಿಪಡಿಸಲು 'ಕರಡು (Draft)'ನ್ನು ಪ್ರಕಟಿಸಿದೆ.**

| ಕ್ರ. ಸಂ. | ಜೇಷ್ಠತಾ ಕ್ರ.ಸಂ. | ವಲಯ ಅರಣ್ಯಾಧಿಕಾರಿ ಹೆಸರು | ಎಸ್ ಸಿ/ ಎಸ್‌ಟಿ | ನೇರ/ ಬಡ್ತಿ | ಜನ್ಮ ದಿನಾಂಕ | ಸೇವೆಗೆ ಸೇರಿದ/ ವ.ಅ.ಅ. ನೇರ ನೇಮಕ/ ಉ.ವ.ಅ-ಕಂ-ಮೋ ನೇರ ನೇಮಕ/ ಬಡ್ತಿ ದಿನಾಂಕ | ನೈಜವಾಗಿ ಬಡ್ತಿ ಹೊಂದಿದ ದಿನಾಂಕ | ಅರ್ಹತಾ ದಿನಾಂಕ | ಷರಾ |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 |
| 1608 | 1608 | ಗಣೇಶ್ ಹೆಗ್ಡೆ | - | ನೇರ | 07-01-1987 | 16-01-2014 | NA | 16-01-2014 | ವ.ಅ.ಅ. ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ |
| 1609 | 1609 | ಸಂದೀಪ್ ಎಂ. | ಎಸ್.ಸಿ | ನೇರ | 17-04-1987 | 11-08-2014 | NA | 11-08-2014 | ವ.ಅ.ಅ. ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ |
| **1609A** | **1609A** | **ಪ್ರವೀಣ್ ಕುಮಾರ್. ಎನ್.** | **-** | **ನೇರ** | **26-04-1987** | **04-12-2014** | **NA** | **04-12-2014** | **ವ.ಅ.ಅ. ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ** |
| 1610 | 1610 | ಲಿಂಗಪ್ಪ ಎನ್. ಎಂ. | ಎಸ್.ಟಿ | ಬಡ್ತಿ | 08-03-1959 | 12-07-1986 | 06-01-2014 | 31-01-2014 | ವಯೋ ನಿವೃತ್ತಿ |
| ........ | ........ | ........ | ........ | ........ | ........ | ........ | ........ | ........ | ........ |
| **1650** | **1650** | **DELETED** | | | | | | | |

ಮೇಲ್ಕಂಡಂತೆ ಶ್ರೀ ಪ್ರವೀಣ್ ಕುಮಾರ್ ಎನ್., ವಲಯ ಅರಣ್ಯಾಧಿಕಾರಿ (ಅಭ್ಯರ್ಥಿ) ಇವರ ಜ್ಯೇಷ್ಠತೆಯನ್ನು ಮರುನಿಗದಿಪಡಿಸಲು ಪ್ರಕಟಿಸಿದ **'ಕರಡು (Draft)'**ಗೆ ಸಂಬಂಧಿಸಿದಂತೆ ಬಾಧಿತರಾದವರು ಆಕ್ಷೇಪಣೆಗಳನ್ನು **ಸ್ಪಷ್ಟ ರೀತಿಯಲ್ಲಿ ಪೂರಕ ಸಮರ್ಥನೀಯ ದಾಖಲಾತಿಗಳೊಂದಿಗೆ** ಇಲಾಖೆಯ ಜಾಲತಾಣ www.aranya.gov.in ರಲ್ಲಿ ಈ ಆದೇಶವನ್ನು **ಪ್ರಕಟಿಸಿದ 15 ದಿನಗಳೊಳಗಾಗಿ** ಈ ಕಛೇರಿಯ ಸಂಬಂಧಿಸಿದ ಶಾಖೆಯ ಇ-ಮೇಲ್ ವಿಳಾಸ **"pccfb1sec@gmail.com"**ರ ಮೂಲಕ ಸಲ್ಲಿಸಬಹುದಾಗಿದೆ.

*ಭೌತಿಕವಾಗಿ/ ಬೇರೆ ಇ-ಮೇಲ್‌ಗಳಿಗೆ/ ದೂರವಾಣಿ/ ಸಾಮಾಜಿಕ ಮಾಧ್ಯಮ (Social media) ಮುಂತಾದ ಇತರೆ ಮಾಧ್ಯಮಗಳ* ಮೂಲಕ ಕಳುಹಿಸುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲವೆಂದು ಸ್ಪಷ್ಟಪಡಿಸಿದೆ. ಅಲ್ಲದೇ, ಅಸ್ಪಷ್ಟ ಆಕ್ಷೇಪಣೆಗಳನ್ನು ಹಾಗೂ **ನಿಗದಿತ ದಿನಾಂಕ ಮೀರಿ ಸ್ವೀಕರಿಸಿದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.**

Signed by
Brijesh Kumar Dikshit
Date: 31-07-2024 18:51:48

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು)

**ಪ್ರತಿ ಮಾಹಿತಿ /ಹಾಗೂ ಮುಂದಿನ ಕ್ರಮಕ್ಕಾಗಿ** *[ಇಲಾಖೆಯ ಜಾಲತಾಣದಲ್ಲಿ ಪ್ರಕಟಣೆ ಮೂಲಕ/ ಇ–ಮೇಲ್ ಮೂಲಕ/ ನಿಯಂತ್ರಣಾಧಿಕಾರಿಗಳ ಮೂಲಕ]:*

1. ಎಲ್ಲಾ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ.

2. ಎಲ್ಲಾ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ.
3. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮಾಹಿತಿ ಸಂವಹನ ತಂತ್ರಜ್ಞಾನ), ಅರಣ್ಯ ಭವನ, ಬೆಂಗಳೂರು - **ಈ ಅಧಿಕೃತ ಜ್ಞಾಪನವನ್ನು ಇಲಾಖೆಯ ಜಾಲತಾಣದಲ್ಲಿ ಪ್ರಕಟಿಸಲು.**
4. ಎಲ್ಲಾ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ.
5. ಎಲ್ಲಾ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ.
6. ಎಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ.
7. ಎಲ್ಲಾ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ.
8. ರಾಜ್ಯದ ಎಲ್ಲಾ ವಲಯ ಅರಣ್ಯಾಧಿಕಾರಿ(Range Forest officers)ಗಳಿಗೆ.
9. ಈ ಕಚೇರಿಯ ಕಡತ ಸಂಖ್ಯೆ:KFD/HOFF/B1(EST)/104/2023-PnR-KFD, [E-1162701]ಗೆ.
10. ಈ ಕಚೇರಿಯ ಕಡತ ಸಂಖ್ಯೆ:KFD/HOFF/B1(EST)/31/2024-PnR-KFD, [E-1382706]ಗೆ - **ಪ್ರಸ್ತುತ ವಿಷಯದ ಮುಂದಿನ ನಿರ್ವಹಣೆಗಾಗಿ.**